# 11. ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ.

**1. ಸಂತಾನೋತ್ಪತ್ತಿ ಎಂದರೇನು? ಅದರಲ್ಲಿ ಎಷ್ಟು ವಿಧ ತಿಳಿಸಿ.**

ಸಂತಾನೋತ್ಪತ್ತಿಯು ಒಂದು ಜೈವಿಕ ಪ್ರಕ್ರಿಯೆಯಾಗಿದ್ದು, ಈ ಪ್ರಕ್ರಿಯೆಯಿಂದ ಹೊಸ ಜೀವಿಗಳು ಉಗಮಿಸುತ್ತವೆ. ಸಂತಾನೋತ್ಪತ್ತಿಯಲ್ಲಿ ಎರಡು ವಿಧ. ಲೈಂಗಿಕ ಸಂತಾನೋತ್ಪತ್ತಿ ಮತ್ತು ಅಲೈಂಗಿಕ ಸಂತಾನೋತ್ಪತ್ತಿ.

**2. ಜೀವಿಗಳು ತಮ್ಮದೇ ನಿಖರ ಪ್ರತಿಕೃತಿಯನ್ನು ಸೃಷ್ಟಿಸುತ್ತವೆಯೇ?**

ಜೀವಿಗಳು ತಮ್ಮದೇ ಆದ ಹೊಸ ಪ್ರತಿಕೃತಿಯನ್ನು ಸೃಷ್ಟಿಸುತ್ತವೆ. ಆದರೆ, ಸಂತಾನೋತ್ಪತ್ತಿ ಜೀವಕೋಶಗಳು (ವೀರ್ಯಾಣು/ಅಂಡಾಣು) ಸಂಯೋಗವಾಗುವಾಗ ವರ್ಣತಂತುಗಳ ಅಡ್ಡಹಾಯುವಿಕೆಯಲ್ಲಿನ ಕೆಲವು ಬದಲಾವಣೆಗಳಿಂದಾಗಿ ಹೆಚ್ಚಿನ ಭಿನ್ನತೆಗಳು ಕಂಡುಬರುತ್ತವೆ.

**3. ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ಡಿಎನ್‌ಎ ಸ್ವಪ್ರತೀಕರಣವು ಹೆಚ್ಚು ಅತ್ಯಗತ್ಯ ಹಾಗೂ ಮಹತ್ವದಿಂದ ಕೂಡಿದೆ. ಏಕೆ?**

- ಡಿಎನ್‌ಎ ಸ್ವಪ್ರತೀಕರಣದಿಂದಾಗಿ, ಜೀವಿಗಳು ಆನುವಂಶೀಯ ಸ್ಥಿರತೆಯನ್ನು ಹೊಂದುತ್ತವೆ.
- ಪೋಷಕ ಜೀವಿಗಳಲ್ಲಿನ ಲಕ್ಷಣಗಳು ಮರಿಜೀವಿಗಳಲ್ಲಿ ಕಾಣಲು ಸಾಧ್ಯವಾಗಿದೆ.
- ಡಿಎನ್‌ಎ ಸ್ವಪ್ರತೀಕರಣದಿಂದ ಕೋಶವಿಭಜನೆಯ ಸಂದರ್ಭದಲ್ಲಿ ತಾಯಿ ಜೀವಕೋಶದಲ್ಲಿನ ವರ್ಣತಂತುಗಳ ಸಂಖ್ಯೆಯಷ್ಟೇ ಮರಿ ಜೀವಕೋಶಗಳಲ್ಲೂ ಕಾಣಬಹುದು.

**4. ಭಿನ್ನತೆಯು ಒಂದು ಪ್ರಭೇದಕ್ಕೆ ಉಪಯುಕ್ತ. ಆದರೆ, ಒಂದು ಜೀವಿಗೆ ಅಗತ್ಯವಿಲ್ಲ ಏಕೆ?**

ಭಿನ್ನತೆಯು ಜೀವಿಗಳ ಪ್ರಭೇದಗಳು ಬದುಕುಳಿಯಲು ಉಪಯುಕ್ತವಾಗಿವೆ.
ಆದರೆ ಭಿನ್ನತೆಯಿಂದಾಗಿ ಕೆಲವು ಜೀವಿಗಳ ಪ್ರಭೇದಗಳು ಪರಿಸರದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದೆ ಅಳಿದು ಹೋಗಲೂ/ಗಿರಲೂ ಬಹುದು.

**5. ಅಲೈಂಗಿಕ ಸಂತಾನೋತ್ಪತ್ತಿ ಎಂದರೇನು? ಅವುಗಳ ವಿಧಗಳನ್ನು ತಿಳಿಸಿ.**

ಏಕ ಜೀವಿಗಳಿಂದ/ಜೀವಿಗಳಲ್ಲಿ (ದ್ವಿಲಿಂಗಿ ಜೀವಿಗಳನ್ನು ಹೊರತು ಪಡಿಸಿ) ನಡೆಯುವ ಸಂತಾನೋತ್ಪತ್ತಿಗೆ ಅಲೈಂಗಿಕ ಸಂತಾನೋತ್ಪತ್ತಿ ಎನ್ನವುರು.
ಅಲೈಂಗಿಕ ಸಂತಾನೋತ್ಪತ್ತಿಯ ವಿಧಗಳು: ವಿದಳನ, ಬಹುವಿದಳನ, ತುಂಡರಿಕೆ, ಕಾಯಜ ಸಂತಾನೋತ್ಪತ್ತಿ, ಪುನರುತ್ಪಾದನೆ, ಮೊಗ್ಗುವಿಕೆ, ಬೀಜಕಗಳ ಉತ್ಪಾದನೆ. . .

**6.ವಿದಳನದಿಂದ ಸಂತಾನೋತ್ಪತ್ತಿಯಾಗುವ ಬಗೆಯನ್ನು ಸಂಕ್ಷಿಪ್ತವಾಗಿ ತಿಳಿಸಿ.**



ಜೀವಿಗಳ ದೇಹ ವಿಭಜಿಸಿ ಎರಡಾಗಿ, ಎರಡೂ ದೇಹಗಳು ಹೊಸ ಜೀವಿಗಳಾಗಿ ಬೆಳೆಯುವುದನ್ನು ವಿದಳನ ಎನ್ನುವರು.
ಉದಾ: ಏಕಕೋಶೀಯ ಜೀವಿಗಳಾದ ಅಮೀಬಾ, ಲೆಶ್ಮೇನಿಯಾ ಹಾಗೂ ಬ್ಯಾಕ್ಟೀರಿಯಾದಂಥ ಜೀವಿಗಳಲ್ಲಿ ವಿದಳನ/ದ್ವಿವಿದಳನದಿಂದ ಸಂತಾನೋತ್ಪತ್ತಿ ನಡೆಯುತ್ತದೆ.

**7. ಬಹುವಿದಳನ ಎಂದರೇನು? ಉದಾ.ಕೊಡಿ.**



ಜೀವಿಗಳ ಶಾರೀರಿಕ ಸಂರಚನೆಯಿಂದಾಗಿ, ಕೆಲವು ಜೀವಿಗಳಲ್ಲಿ ದೇಹವು ಒಂದೇ ಬಾರಿಗೆ ಅನೇಕ ಮರಿ ಜೀವಕೋಶಗಳು ಉತ್ಪತ್ತಿಯಾಗಿ, ಹೊಸ ಜೀವಿಯಾಗಿ ಬೆಳೆಯುತ್ತವೆ. ಇದಕ್ಕೆ ಬಹುವಿದಳನ ಎನ್ನುವರು. ಉದಾ: ಪ್ಲಾಸ್ಮೋಡಿಯಂ (ಪರೋಪಜೀವಿ).

**8. ಪುನರುತ್ಪಾದನೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.**



ಸಂಪೂರ್ಣವಾಗಿ ವಿಭೇದೀಕರಿಸಿದ ಅನೇಕ ಜೀವಿಗಳು ತಮ್ಮ ದೇಹದ ಭಾಗಗಳಿಂದ ಹೊಸ ಜೀವಿಗಳನ್ನು ಉತ್ಪಾದಿಸುತ್ತವೆ. ಇದನ್ನು ಪುನರುತ್ಪಾದನೆ ಎನ್ನುವರು. ಉದಾ: ಪ್ಲನೇರಿಯಾದ ದೇಹವು ವಿಭಜಿಸಿ, ಪ್ರತಿ ವಿಭಜಿತ ಭಾಗವು ಕೋಶವಿಭಜನೆಯನ್ನು ಮುಂದುವರೆಸಿ ಹೊಸ ಪ್ಲನೇರಿಯಾ ಜೀವಿಗಳಾಗುತ್ತವೆ.

**9. ಮೊಗ್ಗುವಿಕೆಯಿಂದ ಸಂತಾನೋತ್ಪತ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ.**



ಹೈಡ್ರಾದಂಥ ಜೀವಿಗಳು, ಪ್ರೌಢಹಂತ ತಲುಪಿದಾಗ ದೇಹದ ಮೇಲೆ ಮೊಗ್ಗುಗಳ ರಚನೆಗಳನ್ನು ಬಿಡುತ್ತವೆ. ಇವುಗಳಿಗೆ ಅಂಕುರ ಮೊಗ್ಗುಗಳು ಎನ್ನುವರು. ಈ ಮೊಗ್ಗುಗಳು ತಾಯಿ ದೇಹದಿಂದ

ಬೇರ್ಪಟ್ಟು ಹೊಸ ಜೀವಿಯಾಗಿ ಬೆಳೆಯುತ್ತವೆ. ಇದನ್ನು ಮೊಗ್ಗುವಿಕೆ ಎನ್ನುವರು.

**10. ಕಾಯಜ ಸಂತಾನೋತ್ಪತ್ತಿ ಎಂದರೇನು? ಉದಾ. ಕೊಡಿ**



ಜೀವಿಯ ದೇಹದ ಯಾವುದಾದರೊಂದು ಭಾಗದಿಂದ(ಬೇರು, ಕಾಂಡ, ಎಲೆ) ಹೊಸ ಜೀವಿಯನ್ನು ಪಡೆಯುವ ವಿಧಾನಕ್ಕೆ ಕಾಯಜ ಸಂತಾನೋತ್ಪತ್ತಿ ಎನ್ನುವರು.

ಉದಾಹರಣೆ: ಗುಲಾಬಿ, ದಾಸವಾಳ, ಬ್ರಯೋಫಿಲಂ, ಆಲೂಗಡ್ಡೆಯಂಥ ಸಸ್ಯಗಳಲ್ಲಿ ಅವುಗಳ ದೇಹದ ಕತ್ತರಿಸಿದ ನಿಗಧಿತ ಭಾಗದಿಂದ ಹೊಸ ಸಸ್ಯಗಳು ಬೆಳೆಯುತ್ತವೆ.

**11. ಒಂದು ವೇಳೆ ಬೀಜಕಗಳ ಮೂಲಕ ಒಂದು ಜೀವಿಯು ಸಂತಾನೋತ್ಪತ್ತಿ ನಡೆಸಿದರೆ ಅದಕ್ಕಾಗುವ ಪ್ರಯೋಜನವೇನು?**




- ಬೀಜಕಗಳ ಉತ್ಪಾದನೆಯಿಂದ ಜೀವಿಯ ಸಂತತಿ ಹೆಚ್ಚುತ್ತದೆ.
- ಬೀಜಕಗಳ ಸುತ್ತ ದಪ್ಪನಾದ ಹೊದಿಕೆಯಿರುವುದರಿಂದ ಅನುಕೂಲಕರ ಸ್ಥಿತಿ (ತೇವಾಂಶಯುಕ್ತ ಮೇಲ್ಮೈ) ದೊರೆಯುವವರೆಗೆ ಬೀಜಕಗಳು ಸುರಕ್ಷಿತವಾಗಿರುತ್ತವೆ.
- ಗಾಳಿಯ ಮೂಲಕ ಬಹುದೂರ ಪ್ರದೇಶಕ್ಕೆ ಚಲಿಸುವುದರಿಂದ ಹೆಚ್ಚಿನ ಪ್ರದೇಶಗಳಲ್ಲಿ ಸಂತತಿ ಮುಂದುವರೆಯುತ್ತದೆ.

  ಉದಾ: ಬ್ರೆಡ್ ಮೌಲ್ಡ್.

**12. ಹೆಚ್ಚು ಸಂಕೀರ್ಣ ಜೀವಿಗಳು ಪುನರುತ್ಪಾದನೆಯ ಮೂಲಕ ಹೊಸ ಜೀವಿಗಳನ್ನು ಏಕೆ ಸೃಷ್ಟಿಸಲಾರವು ಎಂಬುದಕ್ಕೆ ನೀವು ಕಾರಣಗಳನ್ನು ಕೊಡಿ.**

ಸಂಕೀರ್ಣವಾದ ಜೀವಿಗಳ ದೇಹವು ಹೆಚ್ಚು ಭಿನ್ನತೆಯಿಂದ ಕೂಡಿದ್ದು, ಈ ಭಿನ್ನ ಲಕ್ಷಣಗಳನ್ನು ಪುನರುತ್ತಾದನೆಯಿಂದ ಪಡೆಯಲು ಸಾಧ್ಯವಿಲ್ಲ.

ಪುನರುತ್ಪಾದನೆ ಹೊಂದುವ ಕಾಯಜ ಕೋಶಗಳು ಒಂದೇ ಬಗೆಯವಾಗಿರುತ್ತವೆ. ಈ ಕಾರಣಗಳಿಂದ ಸಂಕೀರ್ಣ ಜೀವಿಗಳು ಪುನರುತ್ಪಾದನೆಯಿಂದ ಹೊಸ ಜೀವಿಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ.

**13. ಕಾಯಜ ಸಂತಾನೋತ್ಪತ್ತಿಯು ಕೆಲವು ವಿಧದ ಸಸ್ಯಗಳನ್ನು ಪಡೆಯಲು ಹೆಚ್ಚು ಸೂಕ್ತ. ಕಾರಣ** ತಿಳಿಸಿ.

- ಕಾಯಜ ಸಂತಾನೋತ್ಪತ್ತಿಯಿಂದ ಪಡೆದ ಸಸ್ಯಗಳು ಸಾಮಾನ್ಯವಾಗಿ ವೇಗವಾಗಿ ಬೆಳೆಯುತ್ತವೆ.
- ಇವುಗಳು ಬೇಗ ಫಲವನ್ನು ನೀಡುತ್ತವೆ ಹಾಗೂ ಇವುಗಳ ಜೀವಿತಾವಧಿ ಕಡಿಮೆ.
- ಉತ್ಪತ್ತಿಯಾದ ಎಲ್ಲಾ ಸಸ್ಯಗಳು ಆನುವಂಶೀಯವಾಗಿ ಪೋಷಕ ಸಸ್ಯವನ್ನು ಅವುಗಳ ಎಲ್ಲಾ ಲಕ್ಷಣಗಳೊಂದಿಗೆ ಹೋಲುತ್ತವೆ.
- ಸಾಮಾನ್ಯವಾಗಿ ಗುಲಾಬಿ, ಕಬ್ಬು, ಬಾಳೆ ಸಸ್ಯಗಳನ್ನು ಈ ವಿಧಾನದಿಂದ ಹೆಚ್ಚಾಗಿ ಬೆಳೆಯಲಾಗುತ್ತದೆ.

**14. ಲೈಂಗಿಕ ಸಂತಾನೋತ್ಪತ್ತಿ ಎಂದರೇನು? ಉದಾ.ಕೊಡಿ**

ಗಂಡು ಮತ್ತು ಹೆಣ್ಣು ಲಿಂಗಾಣುಗಳ ಪರಸ್ಪರ ಸಂಯೋಗದಿಂದ ನಡೆಯುವ ಸಂತಾನೋತ್ಪತ್ತಿಗೆ ಲೈಂಗಿಕ ಸಂತನೋತ್ಪತ್ತಿ ಎನ್ನುವರು.

ಉನ್ನತಮಟ್ಟದ ಸಸ್ಯ (ಬೀಜಗಳನ್ನು ಬಿಡುವ) ಮತ್ತು ಪ್ರಾಣಿಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಸಾಮಾನ್ಯವಾಗಿದೆ.

**15. ಹೊಸ ಪೀಳಿಗೆಯ ಜೀವಿಗಳಲ್ಲಿ ಕ್ರೋಮೋಸೋಮ್‌ಗಳ ಸಂಖ್ಯೆ ಮತ್ತು ಡಿಎನ್ಎ ಪ್ರಮಾಣದಲ್ಲಿ ಮರು ಹೊಂದಾಣಿಕೆ ಹೇಗೆ ಉಂಟಾಗುತ್ತದೆ?**

ಲೈಂಗಿಕ ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ಜೀವಿಗಳ ಲಿಂಗಕೋಶಗಳು(ಏಕಗುಣಿತ) ಸಂಯೋಜಿಸಿ ಹೊಸ ಜೀವಿ ಉಂಟಾಗುವುದರ ಪರಿಣಾಮ ಕ್ರೋಮೋಸೋಮ್‌ಹಾಗೂ ಡಿಎನ್ಎ ಪ್ರಮಾಣದಲ್ಲಿ ಮರು ಹೊಂದಾಣಿಕೆ ಉಂಟಾಗುತ್ತದೆ.

**16. ಸಸ್ಯದ ಗಂಡು ಮತ್ತು ಹೆಣ್ಣು ಸಂತಾನೋತ್ಪತ್ತಿ ಭಾಗಗಳನ್ನು ಹೆಸರಿಸಿ.**

ಗಂಡು ಭಾಗ: ಕೇಸರ, ಹೆಣ್ಣು ಭಾಗ: ಶಲಾಕ (ಪಿಸ್ಟಿಲ್).

**17. ಶಲಾಕ(ಪಿಸ್ಟಿಲ್)ದಲ್ಲಿನ ಮೂರುಭಾಗಗಳನ್ನು ಹೆಸರಿಸಿ.** ಅಂಡಾಶಯ, ಶಲಾಕನಳಿಕೆ ಮತ್ತು ಶಲಾಕಾಗ್ರ.

**18. ಪರಾಗ ಸ್ಪರ್ಶಕ್ರಿಯೆ ಎಂದರೇನು? ಅದರ ಎರಡು ವಿಧಗಳನ್ನು ತಿಳಿಸಿ.**

ಕೇಸರಗಳಲ್ಲಿನ ಪರಾಗರೇಣುಗಳನ್ನು ಶಲಾಕಾಗ್ರದ ಮೇಲೆ ವರ್ಗಾಯಿಸುವುದನ್ನು ಪರಾಗಸ್ಪರ್ಶ ಕ್ರಿಯೆ ಎನ್ನುವರು.[redacted]ಇದರ ಎರಡು ವಿಧಗಳು

**ಸ್ವಕೀಯ ಪರಾಗಸ್ಪರ್ಶ**: ಒಂದೇ ಹೂವಿನಲ್ಲಿ ಅಥವಾ ಒಂದೇ ಸಸ್ಯದ ಎರಡು ಬೇರೆ ಬೇರೆ ಹೂಗಳಲ್ಲಿನ ಕೇಸರಗಳ ಪರಾಗರೇಣುಗಳನ್ನು ಶಲಾಕಾಗದ್ರ ಮೇಲೆ ವರ್ಗಾಯಿಸುವುದು.
**ಪರಕೀಯ ಪರಾಗಸ್ಪರ್ಶ:** ಒಂದೇ ಪ್ರಭೇದದ ಎರಡು ಬೇರೆ ಬೇರೆ ಸಸ್ಯಗಳ ಹೂಗಳಲ್ಲಿ ಒಂದು ಹೂವಿನ ಪರಾಗರೇಣುಗಳನ್ನು ಇನ್ನೊಂದು ಹೂವಿನ ಶಲಾಕಾಗ್ರದ ಮೇಲೆ ವರ್ಗಾಯಿಸುವುದು.
(*** **ಪರಾಗಸ್ಪರ್ಶ ಕ್ರಿಯೆಯು ನೀರಿನಿಂದಾದರೆ:** ಹೈಡ್ರೋಫಿಲ್ಲಿ, **ಕೀಟಗಳಿಂದ:** ಎಂಟಮೋಫಿಲ್ಲಿ, **ಗಾಳಿ:** ಅನಿಮೋಫಿಲ್ಲಿ, **ಬಾವಲಿ:** ಕೈರಾಪ್ಟೆರೋಫಿಲ್ಲಿ **ಹಾವು:** ಓಫಿಯೋಫಿಲ್ಲಿ)

**19. ಮನುಷ್ಯರಲ್ಲಿ ಗಂಡು ಮತ್ತು ಹೆಣ್ಣು ಸಂತಾನೋತ್ಪ್ತಿ ಅಂಗಗಳಾವುವು ಮತ್ತು ಅವು ಸ್ರವಿಸುವ ಹಾರ್ಮೋನ್‌ಗಳನ್ನು ಹೆಸರಿಸಿ.**
ಗಂಡು ಸಂತಾನೋತ್ಪತ್ತಿ ಅಂಗ: ವೃಷಣಗಳು, ಇವು ಸ್ರವಿಸುವ ಹಾರ್ಮೋನ್ ಟೆಸ್ಟೋಸ್ಟೀರಾನ್
ಹೆಣ್ಣು ಸಂತಾನೋತ್ಪತ್ತಿ ಅಂಗ: ಅಂಡಾಶಯ, ಇದು ಸ್ರವಿಸುವ ಹಾರ್ಮೋನ್‌ಗಳು ಈಸ್ಟ್ರೋಜನ್ ಮತ್ತು ಪ್ರೊಜೆಸ್ಟೀರಾನ್

**20. ಋತುಚಕ್ರ ಎಂದರೇನು?**
ಪ್ರೌಢಾವಸ್ಥೆ ತಲುಪಿದ ಸ್ತ್ರೀಯರಲ್ಲಿ ಪ್ರತಿ ಇಪ್ಪತ್ತೆಂಟು ದಿನಗಳಿಗೊಮ್ಮೆ ಅಂಡಾಣು ಉತ್ಪತ್ತಿಯಾಗುವುದನ್ನು ಋತುಚಕ್ರ ಎನ್ನುವರು.

**21. ವೀರ್ಯ ಕೋಶಿಕೆಯ ಕಾರ್ಯವೇನು?**ವೀರ್ಯಕೋಶಿಕೆಯು ವೀರ್ಯಾಣುಕೋಶಗಳಿಗೆ ಪೋಷಣೆಯನ್ನು ಒದಗಿಸುತ್ತದೆ.

**22. ಪ್ರೋಸ್ಟೇಟ್ ಗ್ರಂಥಿಯ ಕಾರ್ಯವೇನು?**
ಪ್ರೋಸ್ಟ್ರೇಟ್ ಗ್ರಂಥಿಯು ವೀರ್ಯಾಣು ಕೋಶಗಳ ಸಾಗಾಣಿಕೆಗೆ ಅವಶ್ಯಕವಾದ ದ್ರವವಸ್ತುವನ್ನು ಉತ್ಪಾದಿಸುತ್ತದೆ.

**23. ಗರ್ಭನಿರೋಧಕತೆಯ ವಿವಿಧ ವಿಧಾನಗಳಾವುವು?**
* ವೀರ್ಯಾಣುವ ಅಂಡಾಣುವನ್ನು ತಲುಪದಂತೆ ಯಾಂತ್ರಿಕ ತಡೆಯನ್ನು ಉಂಟುಮಾಡುವುದು.
* ಗರ್ಭನಿರೋಧಕ ಮಾತ್ರೆಗಳನ್ನು ಬಳಸುವುದು, * ಶಿಶ್ನದ ಮೇಲೆ ಗರ್ಭನಿರೋಧಕ ಸಾಧನ(ಕಾಂಡೋಮ್) ಧರಿಸುವುದು
* ಯೋನಿಯೊಳಗೆ ಚೀಲವನ್ನು ಅಳವಡಿಸಿಕೊಳ್ಳುವುದು, * ದೇಹದ ಹಾರ್ಮೋನ್‌ಗಳ ಸಮತೋಲವನ್ನು ಬದಲಾಯಿಸುವುದು
* ಗರ್ಭಕೋಶಕ್ಕೆ ಗರ್ಭನಿರೋಧಕ ಸಾಧನಗಳನ್ನು (ಕಾಪರ್-ಟಿ) ಅಳವಡಿಸಿಕೊಳ್ಳುವುದು.

**24. ತಾಯಿಯ ದೇಹದೊಳಗೆ ಭ್ರೂಣವು ಪೋಷಣೆಯನ್ನು ಹೇಗೆ ಪಡೆಯುತ್ತದೆ?**
ವಿಶೇಷ ಅಂಗಾಂಶವಾದ ಜರಾಯು(ಕರುಳುಬಳ್ಳಿ) ಮೂಲಕ ಭ್ರೂಣವು ತಾಯಿಯ ರಕ್ತದ ಮೂಲಕ ಪೋಷಣೆಯನ್ನು ಪಡೆಯುತ್ತದೆ.

**25. ಪ್ರೌಢಾವಸ್ತೆಯ ಸಮಯದಲ್ಲಿ ಹುಡುಗಿಯರಲ್ಲಿ ಕಂಡುಬರುವ ಬದಲಾವಣೆಗಳೇನು?**
* ಮಾಸಿಕ ಋತುಚಕ್ರ ಪ್ರಾರಂಭವಾಗುತ್ತದೆ, * ಸ್ತನಗಳ ಗಾತ್ರ ದೊಡ್ಡದಾಗಲು ಪ್ರಾರಂಭವಾಗುತ್ತದೆ,
* ಸ್ತನಾಗ್ರದ ತೊಟ್ಟುಗಳು ದಟ್ಟವಾದ ಬಣ್ಣವನ್ನು ಹೊಂದುತ್ತವೆ * ಸೊಂಟದ ಗಾತ್ರ ಹೆಚ್ಚುತ್ತದೆ
* ವಿರುದ್ಧಲಿಂಗಿಗಳ ನಡುವೆ ಆಕರ್ಷಣೆ ಹೆಚ್ಚಾಗುತ್ತದೆ.

**26. ಒಬ್ಬ ಮಹಿಳೆಯು ಕಾಪರ್-ಟಿಯನ್ನು ಬಳಸುತ್ತಿದ್ದರೆ ಅದು ಲೈಂಗಿಕ ಸಂಪರ್ಕದ ಮೂಲಕ ಹರಡುವ ರೋಗಗಳಿಂದ ಅವಳನ್ನು ರಕ್ಷಿಸಲು ನೆರವಾಗುತ್ತದೆಯೇ?**
ಕಾಪರ್-ಟಿಯು ಗರ್ಭನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆಯೇ ಹೊರತು, ಲೈಂಗಿಕ ಸಂಪರ್ಕದ ಮೂಲಕ ಹರಡುವ ರೋಗಗಳನ್ನು ರಕ್ಷಿಸಲು ನೆರವಾಗುವುದಿಲ್ಲ.

**27. ಮನುಷ್ಯರಲ್ಲಿ ಗಂಡು ಸಂತಾನೋತ್ಪತ್ತಿವ್ಯೂಹದ ಭಾಗಗಳನ್ನು ಹೆಸರಿಸಿ.**
ವೀರ್ಯಾಣುಗಳನ್ನು ಉತ್ಪತ್ತಿ ಮಾಡುವ ವೃಷಣಗಳು, ವೀರ್ಯನಾಳ, ವೀರ್ಯಕೋಶಿಕೆಗಳು, ಪ್ರೋಸ್ಟ್ರೇಟ್ ಗ್ರಂಥಿ, ಮೂತ್ರ ವಿಸರ್ಜನಾ ನಾಳ ಮತ್ತು ಶಿಶ್ನ.

**28. ಮನುಷ್ಯರಲ್ಲಿ ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಭಾಗಗಳನ್ನು ಹೆಸರಿಸಿ.**
ಅಂಡಾಶಯ, ಅಂಡನಾಳಗಳು, ಗರ್ಭಕೋಶ ಮತ್ತು ಯೋನಿ.

**29. ಪ್ರಭೇದಗಳ ಜೀವಿಸಮುದಾಯಗಳಿಗೆ ಸ್ಥಿರತೆಯನ್ನು ಒದಗಿಸಲು ಸಂತಾನೋತ್ಪತ್ತಿಯು ಹೇಗೆ ಸಹಾಯಕವಾಗಿದೆ?**

* ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಎರಡು ಜೀವಿಗಳ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ.

* ಲೈಂಗಿಕ ಸಂತಾನೋತ್ಪತ್ತಿಯಲ್ಲಿ ಡಿಎನ್‌ಎ ಅಣುವಿನ ವಂಶವಾಹಿಗಳ ಜೊತೆಗೂಡುವಿಕೆಯಿಂದಾಗಿ ಭಿನ್ನತೆಗಳು ಉಂಟಾಗುತ್ತವೆ.

* ಡಿಎನ್‌ಎ ಅಣುವಿನ ಸ್ವಪ್ರತೀಕರಣದಿಂದ ಆನುವಂಶೀಯ ಸ್ಥಿರತೆ ಉಂಟಾಗುತ್ತದೆ.

**30. ಗರ್ಭನಿರೋಧಕ ವಿಧಾನಗಳನ್ನು ಅಳವಡಿಸಿಕೊಳ್ಳಲು ಇರಬಹುದಾದ ಕಾರಣಗಳೇನು?**

* ಲೈಂಗಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು * ಮಕ್ಕಳನ್ನು ಹೊಂದದಂತೆ ಇರಲು

* ಗರ್ಭದಾರಣೆಯನ್ನು ತಡೆಯಲು

* ಹೆಚ್‌ಐವಿಯಂಥ ಲೈಂಗಿಕ ಸಂಬಂಧಿ ರೋಗಗಳನ್ನು ತಡೆಯಲು.

*************